ಆ) ವಿಷಯ : <u>ಸಾಗರ ತಾಲ್ಲೂಕಿನ ಕಲ್ಲೊಡ್ಡು ಹಳ್ಳಿ ಕೆರೆ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ.</u>

ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಳೂರು (ಸಾಗರ) :– ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಲು ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಮ್ಮ ತಾಲ್ಲೂಕಿನಲ್ಲಿ ಕಲ್ಲೊಡ್ಡು ಹಳ್ಳಕೆರೆ ಯೋಜನೆಯನ್ನು ಜಾರಿಗೊಳಿಸಲು ಈಗಾಗಲೇ ಪ್ರಸ್ತಾವವನ್ನು ಕಳುಹಿಸಿಕೊಟ್ಟಿದ್ದಾರೆ. ಇವತ್ತು ಸಾಗರ ತಾಲ್ಲೂಕಿನ ಶರಾವತಿಯಲ್ಲಿ ಈಗಾಗಲೇ ಬಹಳಷ್ಟು, ಅಂದರೆ ಎರಡು ಹೋಬಳಿಗಳು ಮುಳುಗಡೆಯಾಗಿ ಹೋಗಿವೆ. ಇವತ್ತು ಅವರಿಗೆ ಪರಿಹಾರ ಸಿಕ್ಕಿಲ್ಲ. ಎರಡನೇ ಹಂತವಾಗಿ, ಅಂಬಳಿಗೋಡು ಎನ್ನುವಂತಹ ಗ್ರಾಮವನ್ನು ಮತ್ತೆ ಮುಳುಗಡೆ ಮಾಡಿದರು. ಅದರಿಂದ ಶಿಕಾರಿಪುರಕ್ಕೆ ನೀರು ಹೋಗುತ್ತದೆ. ಇವತ್ತು ಅಲ್ಲಿಯ ಬಹಳಷ್ಟು ರೈತರಿಗೆ ಏಳು ವರ್ಷಗಳಿಂದ ಪರಿಹಾರವನ್ನೂ ಸಹಿತ ಕೊಟ್ಟಿರಲಿಲ್ಲ. ಅದರ ನಂತರ, ಅದರ ಪಕ್ಕದಲ್ಲೇ 1–1 1/2 ಕಿ.ಮೀ ಅಂತರದಲ್ಲಿ ಈಗ ಕಲ್ಲೊಡ್ಡು ಹಳ್ಳ ಕೆರೆ ಯೋಜನೆಯನ್ನು ಜಾರಿಗೊಳಿಸಬೇಕೆಂದು ಈಗಾಗಲೇ ಸರ್ಕಾರದವರು ಹೊರಟಿದ್ದಾರೆ. ಅದಕ್ಕಾಗಿ 7 ಕೋಟಿ 75 ಲಕ್ಷ ರೂ.ಗಳನ್ನು sanction ಮಾಡಿದ್ದಾರೆ. ಇವತ್ತು 1981ನೇ ಸಾಲಿನಲ್ಲಿ ಕೊಟ್ಟಂತಹ ಸರ್ವೆಯಲ್ಲಿ ಅಲ್ಲಿ 171 ಎಕರೆ ಮುಳುಗಡೆಯಾಗುತ್ತದೆ ಮತ್ತು ಅದರ ಜೊತೆಗೆ ಸುಮಾರು 14 ಮನೆಗಳು ಮುಳುಗಡೆಯಾಗುತ್ತದೆಂದು ಹೇಳಿದ್ದಾರೆ. ಆದರೆ ಕಾಡು ಕೇವಲ 92 ಹೆಕ್ಟೇರ್ ಮಾತ್ರ ಮುಳುಗಡೆಯಾಗುತ್ತದೆಂದು ವರದಿಯನ್ನು ಕೊಟ್ಟಿದ್ದಾರೆ. ಇವತ್ತು ಅಲ್ಲಿ ನಾವು ಬಗರ್‌ಹುಕುಂ ಸಮಿತಿಯಿಂದ 1800 ಜನರಿಗೆ ಜಾಗವನ್ನು sanction ಮಾಡಿಸಿದ್ದೇವೆ. ಅದರ ಜೊತೆಗೆ 1400 ಮನೆಗಳು ಮುಳುಗಡೆಯಾಗುತ್ತಿದೆ. ಶರಾವತಿ ಮುಳುಗಡೆಯಾಗಿ ನಿರಾಶ್ರಿತರಾದವರು ಮತ್ತೆ ಅಲ್ಲೇ ಮನೆ ಕಟ್ಟಿಕೊಂಡಿದ್ದಾರೆ. ಅವರಿಗೆ ನಾವು ಹಕ್ಕುಪತ್ರಗಳನ್ನು ಕೊಟ್ಟಿದ್ದೇವೆ. ಇದರ ಜೊತೆಗೆ 5500 ಎಕರೆಗಳಷ್ಟು ಕಾಡು ಮುಳುಗಡೆಯಾಗುತ್ತದೆ. ಆದರೆ ತಪ್ಪು ಮಾಹಿತಿಯನ್ನು ಅಧಿಕಾರಿಗಳು ಕೊಟ್ಟಿದ್ದಾರೆ. ಹಿಂದಿನ ಆಧಾರ ಇಟ್ಟುಕೊಂಡು, ಹೊಸದಾಗಿ ಸರ್ವೆ ಮಾಡದೆ, ಇವತ್ತು ನಿಜವಾಗಿ ನಮ್ಮ ತಾಲ್ಲೂಕನ್ನು ಮುಳುಗಡೆ ಮಾಡಲಿಕ್ಕೆ ಹೊರಟಿದ್ದಾರೆ. ಇದರ ಬಗ್ಗೆ ನಿಜವಾಗಿಯೂ ಹೇಳಬೇಕೆಂದರೆ, ಎಲ್ಲಾ ಸಂಘ ಸಂಸ್ಥೆಗಳೂ ಇದನ್ನು ಬಹಳ ಖಂಡನೆ ಮಾಡಿದ್ದಾರೆ. ಇವತ್ತು ಪಕ್ಕದಲ್ಲಿರುವಂತಹ ಅಂಬಳಿಗೋಡು ಡ್ಯಾಂ ಏನು ಇವತ್ತು ಕಟ್ಟಿದ್ದಾರೆ, ಅದಕ್ಕೆ ಏಳು ವರ್ಷಗಳಾದರೂ ಇವತ್ತಿಗೂ

ಅಲ್ಲಿನ ರೈತರಿಗೆ ಇನ್ನೂ ಪರಿಹಾರ ಕೊಟ್ಟಿಲ್ಲ ಮತ್ತು ಅವರಿಗೆ ಯಾವುದೇ ಸೌಲಭ್ಯ ಕೊಡದೆ ಇವತ್ತು ಮತ್ತೊಂದು ಡ್ಯಾಂ ಕಟ್ಟಲಿಕ್ಕೆ ಹೊರಟಿರುವುದು ನಿಜವಾಗಿಯೂ ಬಹಳ ಬೇಸರದ ಸಂಗತಿಯಾಗಿದೆ. ಸುಳ್ಳು ಮಾಹಿತಿಗಳನ್ನು ಅಧಿಕಾರಿಗಳು ಕೊಟ್ಟಿದ್ದಾರೆ. ಇದನ್ನು ದಯವಿಟ್ಟು ತಡೆಹಿಡಿಯಬೇಕು. ನಾನು ಒಬ್ಬ ಶಾಸಕನಾಗಿ ಕ್ಷೇತ್ರದಲ್ಲಿದ್ದೇನೆ. ನಮಗೂ ಸಹ ಯಾವುದೇ ಮಾಹಿತಿ ಕೊಡದಂತೆ ಇವತ್ತು ಪಕ್ಕದ ಕ್ಷೇತ್ರಕ್ಕೆ ನೀರು ಕೊಡಲಿಕ್ಕಾಗಿ ನಮ್ಮ ಇಡೀ ಸಾಗರ ಕ್ಷೇತ್ರವನ್ನು ಮುಳುಗಡೆ ಮಾಡುವುದಕ್ಕೆ ಹೋಟಂತೆ ಕಾಣುತ್ತದೆ...

ಅಧ್ಯಕ್ಷರು :– ಶೂನ್ಯ ವೇಳೆಯಲ್ಲಿ ತಾವು ಆ ತರಹ detail ಆಗಿ ಪ್ರಸ್ತಾಪ ಮಾಡಲು ಬರುವುದಿಲ್ಲ. ಮಾನ್ಯ ಸಚಿವರೇ, ದಯವಿಟ್ಟು ಅವರ ಪ್ರಸ್ತಾಪಕ್ಕೆ ಉತ್ತರ ಹೇಳಿ.

(ಗೊಂದಲ)

No, I can't give. ನಿಮ್ಮಗಳಿಗೆ ಇದು ಹುಡುಗಾಟವಾದಂತೆ ಆಗಿದೆ. ಮಾನ್ಯ ಸಚಿವರು ಉತ್ತರ ಹೇಳಿ. ಶೂನ್ಯ ವೇಳೆಯಲ್ಲಿ ಅರ್ಧ ಗಂಟೆ ಕಾಲ ಚರ್ಚೆ ಮಾಡಿದಂತೆ ಮಾಡಿದರೆ ಏನು ಮಾಡುವುದು? ನಿಮಗೆ ಏನೂ ಹೇಳಿದರೂ ಅರ್ಥವಾಗುವುದಿಲ್ಲ. ಇನ್ನಷ್ಟು ಚರ್ಚೆ ಮಾಡಬೇಕೆಂದಿದ್ದರೆ, ಬೇರೆ ನಿಯಮಗಳಡಿಯಲ್ಲಿ ಪ್ರಸ್ತಾಪಿಸಲು ಕೋರಿ ಸೂಚನೆ ಕೊಡಿಸಿ.

ಶ್ರೀ ಧರ್ಮಸಿಂಗ್ :– ಮಾನ್ಯ ಅಧ್ಯಕ್ಷರೆ, ಒಂದು.....

ಅಧ್ಯಕ್ಷರು :– ಸ್ವಾಮಿ, ಈ ತರಹ ಮಾಡಲಿಕ್ಕೆ ಆಗುವುದಿಲ್ಲ. ವಿರೋಧ ಪಕ್ಷದ ನಾಯಕರು ಈ ರೀತಿ ನಿಯಮಗಳ ವಿರುದ್ಧವಾಗಿ ಏನೇನೋ ಮಾಡುವುದಕ್ಕೆಲ್ಲಾ ಕುಮ್ಮಕ್ಕು ಕೊಟ್ಟರೆ ಕಷ್ಟವಾಗುತ್ತದೆ.

ಶ್ರೀ ಧರ್ಮಸಿಂಗ್ :– ನಾನು ಕುಮ್ಮಕ್ಕು ಕೊಡುತ್ತಿಲ್ಲ.

ಅಧ್ಯಕ್ಷರು :– ಏನು ಕುಮ್ಮಕ್ಕು ಕೊಡುತ್ತಿಲ್ಲ?

ಶ್ರೀ ಧರ್ಮಸಿಂಗ್ :– ಮೊನ್ನೆ ನಿಪ್ಪಾಣಿಯಲ್ಲಿ....

ಅಧ್ಯಕ್ಷರು :– ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಕ್ಕೆ ಮಾನ್ಯ ಸಚಿವರು ಉತ್ತರ ಕೊಡಲಿ. ನಂತರ ನಿಮ್ಮ ವಿಷಯವನ್ನು ಪ್ರಸ್ತಾಪಿಸಿ.

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) :– ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರಾದ ಗೋಪಾಲಕೃಷ್ಣ ಬೇಳೂರುರವರು ಸಾಗರ ತಾಲ್ಲೂಕಿನ ಆನಂದಪುರ ಹೋಬಳಿಯಲ್ಲಿರುವ ಕಲ್ಲೊಡ್ಡಿ ಗ್ರಾಮದಲ್ಲಿ, ಕಲ್ಲೊಡ್ಡಿ ಜಲಾಶಯ ನಿರ್ಮಿಸುವುದರಿಂದ ಈ ಭಾಗದಲ್ಲಿ 10–15 ಗ್ರಾಮಗಳು ಜಲಾವೃತವಾಗಿ ಸುಮಾರು 5000ಕ್ಕೂ ಹೆಚ್ಚು ಎಕರೆಗಳಷ್ಟು ಫಲವತ್ತಾದ ಭೂಮಿ ಮುಳುಗಡೆಯಾಗುತ್ತದೆಂದು ಹೇಳುತ್ತಿದ್ದಾರೆ. ಇದನ್ನು ಅವರೇನು ಪ್ರಸ್ತಾಪ ಮಾಡಿದ್ದಾರೆ, ಇದನ್ನು ಖಂಡಿತ ನಾನು ಮತ್ತೆ ಸರ್ವೆ ಮಾಡಿಸುತ್ತೇನೆ. ಇಡೀ ಸಾಗರವೇ ಮುಳುಗಿ ಹೋಗುತ್ತದೆ ಎನ್ನುವಂತಹ ಮಾತನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆ ರೀತಿ ಅನ್ಯಾಯವಾಗುವುದಾದರೆ, ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಳೂರು :– ಮಾನ್ಯ ಅಧ್ಯಕ್ಷರೆ,....

(ಗೊಂದಲ)

ಅಧ್ಯಕ್ಷರು :– ಹಲವಾರು ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು ಕೊಟ್ಟಿದ್ದೀರಿ. ಅಲ್ಲದೆ Calling Attentions ಸಹ ಕೊಟ್ಟಿದ್ದೀರಿ. ಎಲ್ಲದಕ್ಕೂ ನಾಳೆ ಅವಕಾಶ ಕೊಡುತ್ತೇನೆ. ದಯಮಾಡಿ, ಇವತ್ತು ಬಿಲ್‌ಗಳು ಪಾಸ್ ಆಗಲಿ. ಅವು ಇನ್ನೂ ಆ ಮನೆಗೂ ಹೋಗಬೇಕಾಗಿದೆ. ದಯಮಾಡಿ ಎಲ್ಲರೂ ಸಹಕರಿಸಿ.

(ಗೊಂದಲ)

ಇ) ವಿಷಯ : ನಿಪ್ಪಾಣಿ ತಾಲ್ಲೂಕಿನಲ್ಲಿರುವ ತಂಬಾಕು ಬೆಳೆಗಾರರ ಭವಣೆಯ ಬಗ್ಗೆ.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೆ, ನಿಪ್ಪಾಣಿಯಲ್ಲಿರುವ ತಂಬಾಕು ಬೆಳೆಗಾರರಿಗೆ ಬಹಳ ಅನ್ಯಾಯವಾಗಿದೆ. 8 ಲಕ್ಷ ಜನರು ಇವತ್ತು ನಿರುದ್ಯೋಗಿಗಳಾಗಿದ್ದಾರೆ. ತಂಬಾಕು ಮಾಡಿ ಪಶ್ಚಿಮ ಬಂಗಾಳ, ಬೇರಳ ಎಲ್ಲಾ ಕಡೆಗೆ ಕಳುಹಿಸುವುದೇ ಅಲ್ಲಿನ main ಉದ್ಯೋಗವಾಗಿದೆ. ಸರ್ಕಾರ ದಲ್ಲಿ ತಂಬಾಕನ್ನು VAT ಪಟ್ಟಿಯಲ್ಲಿ ಸೇರಿಸಿದೆ. ಮಹಾರಾಷ್ಟ್ರದಲ್ಲಿ ಅದಕ್ಕೆ Exemption ಕೊಟ್ಟಿದ್ದಾರೆ. ನಿಪ್ಪಾಣಿಯಲ್ಲಿ ನಮ್ಮ ಎಂ.ಎಲ್.ಎ.ರವರಾದ ಕಾಕಾ ಸಾಹೇಬ್ ಪಾಂಡುರಂಗ ಪಾಟೀಲ್‌ರವರ ನೇತೃತ್ವದಲ್ಲಿ ದೊಡ್ಡ ಪ್ರತಿಭಟನೆ ನಡೆದಿದೆ.